REGISTERED KA/BGW-1788/2020-2022 RNI No.KARBIL/2016/69545 MAG(3)/NPP/391/2015-2016

# MYSORE BANK SHATHAYU

# ಮೈಸೂರ್ ಬ್ಯಾಂಕ್ ಶತಾಯು

VOLUME - VI JANUARY - 2021 MONTHLY RS. 2/- ISSUE-01

House Bulletin of State Bank of Mysore Pensioners' Commune (R) - For Internal Circulation

## RESIDUAL ISSUES - OFFICERS' ASSOCIATIONS DISCUSS PENSION UPDATION

The Government of India has approved the provisions of Bipartite Settlement/Joint Note dated 11.11.2020 vide its communication dated 18.12.2020. However, the Government of India advised the Indian Banks Association to submit a detailed proposal along with financial implications/liabilities in respect of the family pension scheme.

It is heartening to note that the New Year began well with Indian Banks Association convening a meeting with four Officers' Associations on 04.01.2021 to discuss and take forward residual issues out of Charter of Demands. Updation of pension is also one of such issues which requires further negotiation / discussion. It was informed that the Indian Banks Association has stated that it is actively evaluating the issue as demanded by the Associations for which an Actuary is appointed. It was also informed by Indian Banks Association that it is compiling details of family pension improvement for onward submission to Department of Financial Services for necessary clearance and approval. It is glad to note that things are moving positively and day of improvement in pension and family pension is not too far away. In the meantime, Apex organization of our Commune, All India Retired Bank Employees Association continues its efforts in getting these issues resolved early.

Memories of members are also recalled with regard to signing of 11th Bipartite Settlement and 8th Joint Note on the 11th November, 2020 was reported in the previous issue of Mysore Bank Shathayu. Views of Hon'ble Finance Minister expressed in an interview to Business Line regarding sorting out issues relating to pensions of those who retired long time ago, whose pension does not commensurate with the pension of equal rank, was reproduced in the previous issue of Mysore Bank Shathayu. Hon'ble Minister is aware that pensioners are waiting for a long time. Subsequently, Four Workmen Unions took up the issues of pensioners namely Pension improvement, improvement in Family Pension, improvement in Ex-gratia of Pre-1986 retirees, etc. with Hon'ble Finance Minister and Indian Banks Association. Thereafter, representatives of four workmen unions had discussions regarding residual issues. Out of these residual issues, periodical updation of pension, enhancement of ex-gratia of pre-1986 retirees, payment of medical insurance premium by the Banks, bringing payment of dearness relief of all pensioners to common index point of 6352, etc. were part of the discussion.

Commune's views and stand with regard to updation and the role of United Forum of Bank Union are well known to its members. Recent developments confirm our views and opinion. It is reiterated that Pension revision / updation would certainly happen. Everyone who is connected has understood the need for updation / revision. Therefore, members are requested to wait for some more time. Members are also requested to not to go by information provided in the social media regarding issues concerning Bank pensioners, especially with regard to updation of pension. Most of these information and messages were posted by ignorant or deliberately misleading. Please ignore, do not forward and do not propagate any such information, even if these messages enhance the hopes.

## SBI MEDICAL INSURANCE SCHEME - APP

Members are aware that SBI Medical Insurance Scheme - Annual Payment Plan was valid upto 15.01.2021. The Bank would pay partial subsidy to all those who are 70 years and above as on the date of commencement of policy period and family pensioners and the subsidy amount along with pension will be credited on 27.01.2021.

Members may receive eCards. In case necessity arises before receipt of eCards, they may use link the https://www.medibuddy.in/ecard. Then they are requested to select 'Employee ID' and enter HRMS Number against 'Employee ID', enter 'STATE BANK OF INDIA' against 'Company's name' and your name, against 'Your name'. Then enter OTP received. Now, eCards will be generated and can be downloaded.

## SUBMISSION OF LIFE CERTIFICATE

The last date for submission of Life Certificate is extended till 28.02.2021. Those who are drawing family pension and staff pension are requested to provide Life Certificate in respect of both HRMS numbers/PF Ids. There are instances in the past, where the Bank Branches have incorporated either of the Life Certificates only which resulted in payment of only one pension.

Staff Pensioners can also send Scanned Copy of the Life Certificate by Email also. Now, the Video Facility for submission of Life Certificate has been enabled in myHRMS mobile app for all pensioners and will be available on and from 14th December, 2020. This facility would not be available to pensioners if this year's Life Certificate is already updated OR Pensioner's verified photograph is not available in HRMS. (For photo uploading, please go to Upload

Photo option in HRMS portal and approach your Branch for verification). If verified photograph is available in HRMS, submission of Life Certificate can be done by Staff pensioner, by recording a short video in myHRMS mobile app, in 3 simple steps : Log into myHRMS and click on Life Certificate Tile, then Click on Record Video for the Purpose of Life Certificate. A few simple questions (e.g. DOB) will appear on the screen. Answer them in clear voice and 'Submit' the video.

MEMBERS ARE REQUESTED TO OBTAIN ACKNOWLEDGMENT UPON SUBMISSION OF LIFE CERTIFICATE/S.

## REGULATION 37 BENEFIT - SBMPC HAS INITIATED NECESSARY LEGAL ACTIONS

***It is only to reassure reiterate and confirm that the Commune has indeed initiated all required legal action in getting this benefit delivered. Writ Petitions have already been filed and Commune is also pursuing this issue through pending cases before Division/Single Benches of Hon'ble High Courts at Ahmedabad, Indore, Hyderabad, Jodhpur and Bangalore. This issue is one of the benefits being pursued in Contempt Petitions pending before Hon'ble Supreme Court. Required strategies and measures have already been initiated. Commune assures and promises undertaking best possible measures, each and every time.***

Members are requested not to lend ears to those who are either ignorant or do not want others to get this benefit. A few individuals who are not members of Commune are indulging in malicious campaign. These individuals are those who challenged that those who retired under VRS 2001/7th Bipartite Period would not get five years benefit and 1616-1684 benefit. They have been proved wrong by our Commune. Commune has ensured payment of differential commutation amount without recovering for the period preceding credit of this portion of commutation amount. Members of our Commune are proud that theirs is the only retirees' organization in the country which has ensured such payment. Still many others are debating what is correct and legally permissible.

Further, it is clarified in abundance that only list of members who have complied with the requirement stipulated by Commune would be handed over to the Court/s at the appropriate time. Submission of Vakalaths of individual members or making them parties is inadvisable/inappropriate.

Acknowledgment letters, Calculation Sheets and Debit Authorisation Forms have already been sent to all those who have remitted the amounts as prescribed by our Commune. Calculation sheets of those who have retired after merger and provided their pension data after 15.08.2020, will also reach them before end of January, 2021. Those who have remitted required amounts, but not received these letters and Debit Authorisations are requested to send information through the link. Those who cannot send data through link are requested to send SMS OR Whatsapp their Employee/HRMS No., Amount remitted, date of remittance to 7026027774. All those who have received letters, but not submitted duly filled and signed Debit Authorisations are requested to send the same to reach our Commune's Office on or before 15.02.2021. It is reiterated that all such duly filled in Debit Authorisations should be sent to our Commune's Office only.

However, these letters and statements for Family Pensioners would take some more time.

## UPDATION OF PENSION IN TERMS OF REGULATION 35(1)

Certain individuals/organisations are circulating messages or pursuing litigation in respect of several issues. Earlier issues of Mysore Bank Shathayu has presented opinion of Commune with regard to pension for Special Allowance, claim for updation of pension based on balance in pension funds and Gratuity. Some are claiming updation/revision of pension based on what is stated in Regulation 35(1), after amendment in 2002/2003. However, no such amendment has taken place in pension regulations of erstwhile Associate Banks. Amended Regulation 35(1) says that *'Amount of Pension:- (1) Basic Pension and additional pension, wherever applicable, shall be updated as per the formulae given in Appendix I'*. Those who are claiming updation of pension based on this portion of regulation are only considering this sentence in parts. They are only taking into consideration *'Amount of Pension:- (1) Basic Pension and additional pension, wherever applicable, shall be updated'*. But, they are ignoring the words '*wherever*' and '*as per the formulae given in Appendix I'*. What is provided in Appendix I is with regard to merger of Dearness Relief with Basic Pay (***not basic pension***) without any loading. Appendix I includes instances of deviation in calculation of pension, as provided in Regulation 35(2) and 38 only. Application of what is provided in Appendix I could be only once. Law does not allow selective application of statute and there is nothing in Appendix - I which provides for updation or improvement of pension of those who retired on or after 29.09.1995, the date of notification of pension regulations. Hon'ble Supreme Court has settled the issue of interpretation of the Statute, like Bank Employees' Pension Regulations, 1995 in ***Commr. of Customs v. Dilip Kumar & Co.*, (2018) 9 SCC 1 : 2018 SCC OnLine SC 747.** It is decided that when a Statute is unambiguous and only meaning can be inferred, irrespective of consequences only that meaning has the field. Any hardship or inconvenience cannot be the basis to alter the meaning employed by the legislation. Only in case of anomaly and/or absurdity, only intention and purpose will determine the meaning. Therefore, pensioners cannot claim pension updation or derive any benefit out of what is provided in Regulation 35(1). It is reiterated that any rule, regulation or provision in any Act needs to be read completely, but not in parts, conveniently. On account of this position of law, pursuing updation of pension based on what is stated in Regulation 35(1), is harmful and counter productive. The only way Bank Pensioners' pension could be revised is through dialogue, negotiation and settlement.

## 11TH BIPARTITE SETTLEMENT - COMMUTATION OF DIFFERENTIAL BASIC PENSION

Those who have retired on or after 01.11.2017 are entitled revised pension and consequently, they are entitled to receive the commutation amount of differential basic pension. Even though there is an option not to take the benefit of Commutation, members are requested to opt for Commutation. Commutation amount comes with several benefits and it is tax free. Members should not see Commutation of Pension only as an instrument which only gives them substantial amount. Discount rate or the cost

is at 6.1% per annum for those who commute pension at the time of retirement on superannuation. Interest rate in Banks is far more than 6.1%. Interest rate will not remain at present level and with raise in rate of inflation, interest rates are bound to rise. For those who retire well before the age 60, Discount rate or the cost is far less than 6.1%. Therefore, Members are requested to commute differential Basic Pension, even if there is reduction in their monthly pension. Though commutation is not a loan, the effective rate of interest one has to pay is an important factor to consider the benefit, even if it is treated as an investment. Take an example of a superannuated employee who invests the same amount in Pradhan Mantri Vaya Vandana Yojana (PMVVY) of LIC, a Government Sponsored scheme for Senior Citizen, he would get monthly Rs.726/- per month for a period of Ten years.

| Particulars | With commutation | Without Commutation |
|---|---|---|
| Commuted amount to be deducted | Rs.1,000/- per month | NIL |
| Amount he/she will have at the time of retirement | Rs.1,17,720/- | NIL |
| Amount of interest/annuity &/or additional pension | Rs. 726/- | Rs.1,000/- |
| Sacrifice on account of Commutation | Rs.274/- | NIL |
| In case of death at any point of time, amount of recovery | No recovery of Rs.1,000/- | No effect |
| Balance/amount at the time of death if death happens after 5 years from the date of retirement @ Rs.274/- pm | Rs.1,17,720/- | Rs.19,718/ |
| Balance/amount at the time of death if death happens after 10 years from the date retirement @ Rs.274/- pm | Rs.1,17,720/- | Rs.47,951/ |
| Balance/amount at the time of death if death happens after 15 years from the date of retirement @ Rs.274/- pm | Rs.1,17,720/- | Rs.88,374/- |

Thus, it is advantageous to opt for commutation on this point also. There are many more advantages to opting for commutation. THE COMMUTATION IS TAX-FREE, WHILE THE PENSION IS TAXABLE. The amount now received can be utilised to fulfil social/family obligations like children's' education, to build a house, to perform a marriage, for investments, etc. The value of money goes on depreciating, and hence the future instalments would not be a burden, since half-yearly DA would be more and more in future and so on.

## SAD DEMISE OF SHRI DHARANENDRA KUMAR, SECRETARY OF SBMPC

Shri Dharanendra Kumar, Secretary of our Commune left for heavenly abode on the morning of 2nd January, 2021 at Gubbi. He was the Secretary of our Commune. This has caused immense and irreparable loss to our Commune and his vast friends and relatives. He was instrumental and also played an important role in formation of Tumkur District Committee. Members of our Commune join in praying Almighty to give strength to members of his family to bear the loss.

## INAUGURATION OF OFFICE OF SHIVAMOGGA DISTRICT COMMITTEE OF SBMPC

23-12-2020 is a red-letter day in the annals of State Bank of Mysore Pensioners' Commune. It is also a day on which District Committee of a Bank Retirees' Association inaugurated its Office in a place/premises which is provided by a State Government. State Bank of Mysore Pensioners' Commune and its members are pioneers. They have foresight and vision. They have shown that it is also possible to enlist the support of the Government in helping the Bank Pensioners. Shri K S Eshwarappa, Hon'ble Minister, Government of Karnataka inaugurated the premises and he offered all the help required. Office of the District Committee was inaugurated by offering floral tribute to photos of H H Shri Nalvadi Kirshnaraja Wodeyar and Sir M Visveshwaraiah, founders of State Bank of Mysore. Shri Chandrashekhar, Principal of the College, Shri Prabhu, area Corporator and Shri Pattabhiram, Senior member who played an important role in allotment of the space were honoured. Shri K T Srinivas Rao, President, Shri K G Krishnananda, Working President and Shri R Somashekhar, General Secretary and a large number of members of Commune including members of the Executive Committee participated. Members of General Council and Central Committee of SBM Pensioners' Commune congratulate the Team – Shivamogga District Committee of SBMPC.





## ಇನ್ನೂ ಇತ್ಯರ್ಥವಾಗದ ವಿಷಯಗಳು ಮತ್ತು ಪಿಂಚಣಿ ಪರಿಷ್ಕರಣೆ ಬಗ್ಗೆ ಮಾತುಕತೆ

11ನೇ ನವೆಂಬರ್ 2020ರಂದು ಸಹಿ ಹಾಕಲಾದ 11ನೇ ದ್ವಿಪಕ್ಷೀಯ ಒಪ್ಪಂದ/ಜಂಟಿ ಟಿಪ್ಪಣಿಗಳಿಗೆ 18.12.2020ರಂದು ಅನುಮೋದನೆ ನೀಡಿರುವ ಭಾರತ ಸರ್ಕಾರವು, ಕುಟುಂಬ ಪರಿಷ್ಕರಣೆಯ ಆರ್ಥಿಕ ಪರಿಣಾಮಗಳು ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದಂತೆ ಸಂಪೂರ್ಣ ವಿವರಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಭಾರತೀಯ ಬ್ಯಾಂಕರುಗಳ ಸಂಘಕ್ಕೆ (ಐಬಿಎ) ಸೂಚಿಸಿದೆ.

ಪಿಂಚಣಿ ಪರಿಷ್ಕರಣೆಯೂ ಸೇರಿದಂತೆ ದ್ವಿಪಕ್ಷೀಯ ಒಪ್ಪಂದ/ಜಂಟಿ ಟಿಪ್ಪಣಿಗಳಲ್ಲಿನ ಇನ್ನೂ ಇತ್ಯರ್ಥವಾಗದ ವಿಷಯಗಳ (Residual issues) ಬಗ್ಗೆ ಹೊಸ ವರ್ಷ 2021ರ ಮೊದಲ ಮಾತುಕತೆಯು 04.01.2021ರಂದು ಐಬಿಎ ಮತ್ತು ನಾಲ್ಕು ಅಧಿಕಾರಿಗಳ ಸಂಘಗಳೊಡನೆ ನಡೆಯಿತು. ಪಿಂಚಣಿ ಪರಿಷ್ಕರಣೆ ಕುರಿತಂತೆ ಅಧ್ಯಯನ ನಡೆಸಲು ಈಗಾಗಲೇ ವಿಮಾಗಣಕರನ್ನು (Actuaries) ನೇಮಕ ಮಾಡಲಾಗಿದ್ದು, ಕುಟುಂಬ ಪಿಂಚಣಿಯ ಸುಧಾರಣೆಗೆ ಸಂಬಂಧಿಸಿದ ವಿವರಗಳನ್ನು ಸಿದ್ಧಪಡಿಸಿ ಶೀಘ್ರದಲ್ಲಿಯೇ ಕೇಂದ್ರ ಸರ್ಕಾರದ ಒಪ್ಪಿಗೆಗೆ ಕಳುಹಿಸಲಾಗುವುದು ಎಂದು ಐಬಿಎ ಹೇಳಿದೆ. ಈ ಮಧ್ಯೆ ನಮ್ಮ ಶೃಂಗ ಸಂಸ್ಥೆಯಾದ ಅಖಿಲ ಭಾರತ ನಿವೃತ್ತ ಬ್ಯಾಂಕ್ ನೌಕರರ ಸಂಘವು ಪಿಂಚಣಿ ವಿಷಯಗಳನ್ನು ಶೀಘ್ರದಲ್ಲಿಯೇ ಬಗೆಹರಿಸುವ ತನ್ನ ಪ್ರಯತ್ನವನ್ನು ಮುಂದುವರಿಸಿದೆ.

ಬ್ಯಾಂಕ್ ಉದ್ಯೋಗಿಗಳ ಪಿಂಚಣಿ ಪರಿಷ್ಕರಣೆಯನ್ನು ಬೆಂಬಲಿಸಿ ಮಾನ್ಯ ಕೇಂದ್ರ ಹಣಕಾಸು ಸಚಿವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು 'ಮೈಸೂರು ಬ್ಯಾಂಕ್ ಶತಾಯು'ವಿನ ಕಳೆದ ಸಂಚಿಕೆಯಲ್ಲಿ ಸವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. ಆ ನಂತರ ನಾಲ್ಕು ಬ್ಯಾಂಕ್ ನೌಕರರ ಸಂಘಗಳು ಮಾನ್ಯ ಕೇಂದ್ರ ಹಣಕಾಸು ಸಚಿವರು ಮತ್ತು ಭಾರತೀಯ ಬ್ಯಾಂಕರುಗಳ ಸಂಘದೊಂದಿಗೆ (ಐಬಿಎ) ಪಿಂಚಣಿ ಪರಿಷ್ಕರಣೆ, ಕುಟುಂಬ ಪಿಂಚಣಿಯಲ್ಲಿ ಸುಧಾರಣೆ, 1986ಕ್ಕೂ ಮೊದಲು ನಿವೃತ್ತರಾದವರಿಗೆ ಎಕ್ಸ್-ಗ್ರೇಷಿಯಾ ಮೊತ್ತದಲ್ಲಿ ಸುಧಾರಣೆ ಇವೇ ಮುಂತಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದು, ಇನ್ನಿತರ ವಿಷಯಗಳಾದ ಆರೋಗ್ಯ ವಿಮೆ ಪ್ರೀಮಿಯಂನ್ನು ಬ್ಯಾಂಕುಗಳೇ ಭರಿಸುವುದು, ಎಲ್ಲಾ ಪಿಂಚಣಿದಾರರಿಗೂ ಬೆಲೆ ಸೂಚ್ಯಂಕ 6532 ಆಧರಿಸಿದ ಏಕರೂಪದ ತುಟ್ಟಿಭತ್ಯೆ ನಿಗದಿಪಡಿಸುವುದು, ಇತ್ಯಾದಿಗಳ ಬಗ್ಗೆಯೂ ಚರ್ಚೆ ನಡೆಸಿರುತ್ತಾರೆ.

ಪಿಂಚಣಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಬ್ಯಾಂಕ್ ನೌಕರರ ಸಂಘಗಳ ಸಂಯುಕ್ತ ವೇದಿಕೆಯ ಪಾತ್ರ ಮತ್ತು ನಮ್ಮ ಕಮ್ಯೂನಿನ ದೃಷ್ಟಿಕೋನದ ಬಗ್ಗೆ ಈಗಾಗಲೇ ನಮ್ಮ ಸದಸ್ಯರಿಗೆ ಸಂಪೂರ್ಣ ಅರಿವಿದೆ. ಇತ್ತೀಚಿನ ಬೆಳವಣಿಗೆಗಳೂ ಅದಕ್ಕೆ ಪೂರಕವಾಗಿವೆ. ವೇತನ ಪರಿಷ್ಕರಣೆ ಮತ್ತು ಪಿಂಚಣಿ ಪರಿಷ್ಕರಣೆಗಳನ್ನು ಎಂದೂ ಪ್ರತ್ಯೇಕಗೊಳಿಸುವಂತಿಲ್ಲ. ಅದೇ ರೀತಿ ಮಾತುಗಕತೆಗಳಲ್ಲಿ ಭಾಗವಹಿಸುವ ನೌಕರರು ಮತ್ತು ಅಧಿಕಾರಿಗಳ ಸಂಘಗಳ ಪ್ರತಿನಿಧಿಗಳು ಪಿಂಚಣಿದಾರರ ಹಿತಾಸಕ್ತಿಗಳನ್ನು ಕಡೆಗಣಿಸುವಂತಿಲ್ಲ. ಈ ಹಿನ್ನೆಲೆಯಲ್ಲಿ, ಬ್ಯಾಂಕ್ ಉದ್ಯೋಗಿಗಳ ಪಿಂಚಣಿ ಪರಿಷ್ಕರಣೆ ಆದಷ್ಟು ಬೇಗ ಸಂಭವಿಸುವುದೆಂಬ ಭರವಸೆ ನಮಗಿದೆ. ಎಲ್ಲರೂ ಸ್ವಲ್ಪ ತಾಳ್ಮೆಯಿಂದ ಕಾಯುವುದು ಅಗತ್ಯ ಅಷ್ಟೆ. ಕೆಲವು ಅಪ್ರಬುದ್ಧ ವ್ಯಕ್ತಿಗಳು ಪಿಂಚಣಿದಾರರ ಹಾದಿ ತಪ್ಪಿಸಬೇಕೆಂಬ ಏಕೈಕ ಉದ್ದೇಶದಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಡುವ ಆಧಾರರಹಿತ ಸುದ್ದಿಗಳನ್ನು ನಿರ್ಲಕ್ಷಿಸಬೇಕೇ ಹೊರತು, ಅವುಗಳನ್ನು ಇನ್ನೊಬ್ಬರಿಗೆ ರವಾನಿಸಬಾರದು.

## ಭಾರತೀಯ ಸ್ಟೇಟ್ ಬ್ಯಾಂಕಿನ ಆರೋಗ್ಯ ವಿಮೆ ಯೋಜನೆ – ವಾರ್ಷಿಕ ಪಾವತಿ ಯೋಜನೆ

ಭಾರತೀಯ ಸ್ಟೇಟ್ ಬ್ಯಾಂಕಿನ ಆರೋಗ್ಯ ವಿಮೆ ಯೋಜನೆ – ವಾರ್ಷಿಕ ಪಾವತಿ ಯೋಜನೆಯ (Annual Payment Plan-APP) ಅವಧಿ 15ನೇ ಜನವರಿ 2021ಕ್ಕೆ ಮುಕ್ತಾಯವಾಗಿದ್ದು, ಎಲ್ಲಾ ಪಾಲಿಸಿದಾರರೂ ಈ ವಿಮಾ ಯೋಜನೆಯನ್ನು ಮತ್ತೊಂದು ವರ್ಷದ ಅವಧಿಗೆ ನವೀಕರಿಸಿದ್ದಾರೆಂದು ಭಾವಿಸಿದ್ದೇವೆ. ಕಳೆದ ವರ್ಷ ಈ ಯೋಜನೆಗೆ ಸೇರದವರಿಗೆ ಹೊಸದಾಗಿ ಸೇರಲು ಅವಕಾಶ ಕಲ್ಪಿಸಲಾಗಿತ್ತು. ನಮಗೆ ತಿಳಿದಿರುವಂತೆ ಅನೇಕರು ಈ ಯೋಜನೆಗೆ ಇದೇ ಮೊದಲ ಬಾರಿ ಸೇರಿರುತ್ತಾರೆ. ಈ ವರ್ಷದ ಯೋಜನೆಯ ಅವಧಿ ಜಾರಿಯಾಗುವ ದಿನಾಂಕದಂದು 70 ವರ್ಷ ಮೇಲ್ಪಟ್ಟ ಎಲ್ಲಾ ಪಿಂಚಣಿದಾರರಿಗೂ ಹಾಗೂ ಕುಟುಂಬ ಪಿಂಚಣಿದಾರರಿಗೂ ಬ್ಯಾಂಕು ಸಹಾಯಧನವನ್ನು ನೀಡಲಿದ್ದು, ಈ ಸಹಾಯಧನವನ್ನು 27.01.2021 ರಂದು ಜನವರಿ ತಿಂಗಳಿನ ಪಿಂಚಣಿಯ ಜೊತೆಗೇ ಪಿಂಚಣಿದಾರರ ಖಾತೆಗಳಿಗೆ ಜಮಾ ಮಾಡಲಾಗುವುದು ಎನ್ನಲಾಗಿದೆ.

ಪಿಂಚಣಿ ಯೋಜನೆಗೆ ಸೇರಿದ ಎಲ್ಲಾ ಪಾಲಿಸಿದಾರರಿಗೂ ವಿಮಾ ಸಂಸ್ಥೆಯು ತನ್ನ ಪ್ರತಿನಿಧಿಗಳ ಮೂಲಕ ಇ-ಕಾರ್ಡ್‌ಗಳನ್ನು ವಿತರಣೆ ಮಾಡುತ್ತದೆ. ಸದಸ್ಯರಿಗೆ ಇ-ಕಾರ್ಡ್ ತುರ್ತಾಗಿ ಬೇಕಿದ್ದಲ್ಲಿ, https://www/medibuddy.in/ecard ಎಂಬ ಕೊಂಡಿಯನ್ನು (ಲಿಂಕ್ ಬಳಸಿ), ಕೆಲವು ಸ್ವವಿವರಗಳನ್ನು ಭರ್ತಿ ಮಾಡುವುದರ ಮೂಲಕ ತಮ್ಮ ಇ-ಕಾರ್ಡನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

## ಜೀವಿತ ಪ್ರಮಾಣಪತ್ರ ಸಲ್ಲಿಕೆ

ಪಿಂಚಣಿದಾರರು ಪ್ರತಿವರ್ಷ ಸಲ್ಲಿಸುವ ಜೀವಿತ ಪ್ರಮಾಣಪತ್ರ ಸಲ್ಲಿಕೆ ಅವಧಿಯನ್ನು ಈ ಬಾರಿ 28ನೇ ಫೆಬ್ರವರಿ 2021ರವರೆಗೆ ಮುಂದೂಡಲಾಗಿದೆ. ಈವರೆವಿಗೂ ಜೀವಿತ ಪ್ರಮಾಣಪತ್ರ ಸಲ್ಲಿಸದಿರುವ ಸದಸ್ಯರು ಕೊನೆಯ ದಿನಾಂಕದವರಿಗೆ ಕಾಯದೆ ಆದಷ್ಟು ಬೇಗ ತಮ್ಮ ಜೀವಿತ ಪ್ರಮಾಣಪತ್ರವನ್ನು ಸಲ್ಲಿಸಿ ಹಾಗೂ **ಸಲ್ಲಿಕೆಯ ಬಗ್ಗೆ ಮರೆಯದೇ ಸ್ವೀಕೃತಿ ಪತ್ರವನ್ನು (acknowledgement) ಪಡೆದುಕೊಳ್ಳಿ.**

ಕೆಲವು ಪಿಂಚಣಿದಾರರು ತಮ್ಮ ಪಿಂಚಣಿ ಮಾತ್ರವಲ್ಲದೆ ಕುಟುಂಬ ಪಿಂಚಣಿಯನ್ನೂ ಪಡೆಯಲು ಅರ್ಹರಾಗಿರುತ್ತಾರೆ. ಅಂತಹವರು ಎರಡೂ ಪಿಂಚಣಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಜೀವಿತ ಪ್ರಮಾಣಪತ್ರಗಳನ್ನು ಸಲ್ಲಿಸುವುದು ಮತ್ತು ಈ ವಿಷಯವನ್ನು ಸಂಬಂಧಪಟ್ಟ ಶಾಖೆಯ ಗಮನಕ್ಕೆ ತರುವುದು ಆವಶ್ಯಕ. ಇಲ್ಲದಿದ್ದಲ್ಲಿ, ಶಾಖೆಯವರು ಒಂದು ಜೀವಿತ ಪ್ರಮಾಣಪತ್ರವನ್ನು ಮಾತ್ರ ದಾಖಲಿಸುವ ಸಾಧ್ಯತೆ ಇರುತ್ತದೆ. ಇದರ ಪರಿಣಾಮವಾಗಿ ಮುಂದಿನ ತಿಂಗಳಿನಿಂದ ಒಂದು ಪಿಂಚಣಿ ಮಾತ್ರ ಖಾತೆಗೆ ಜಮಾ ಆಗಿ ಮತ್ತೊಂದು ಪಿಂಚಣಿ ಸ್ಥಗಿತಗೊಳ್ಳಬಹುದು.

ಶಾಖೆಗೆ ಭೇಟಿ ನೀಡಲು ಸಾಧ್ಯವಾಗದಿರುವ ಪಿಂಚಣಿದಾರರು ಭರ್ತಿಮಾಡಿದ ಜೀವಿತ ಪ್ರಮಾಣಪತ್ರವನ್ನು ಸ್ಕ್ಯಾನ್ ಮಾಡಿ ಇ-ಮೇಲ್ ಮೂಲಕವೂ ಕಳುಹಿಸಲು ಅವಕಾಶವಿದೆ. ಅಲ್ಲದೆ, ಎಲ್ಲಾ ಪಿಂಚಣಿದಾರರಿಗೂ ತಮ್ಮ ಜೀವಿತ ಪ್ರಮಾಣಪತ್ರಗಳನ್ನು ಸಲ್ಲಿಸಲು myHRMS mobile app ನಲ್ಲಿ ವಿಡಿಯೋ ಸೌಲಭ್ಯವನ್ನೂ ಒದಗಿಸಲಾಗಿದೆ. ಆದರೆ ಈಗಾಗಲೇ ಜೀವಿತ ಪ್ರಮಾಣಪತ್ರಗಳನ್ನು ಸಲ್ಲಿಸಿರುವವರಿಗೆ ಮತ್ತು ಎಚ್‌ಆರ್‌ಎಂಎಸ್ ಪೋರ್ಟಲ್‌ನಲ್ಲಿ ತಮ್ಮ ಭಾವಚಿತ್ರವನ್ನು ಇನ್ನೂ ದಾಖಲಿಸದ ಪಿಂಚಣಿದಾರರಿಗೆ ವಿಡಿಯೋ ಸೌಲಭ್ಯ ದೊರೆಯುವುದಿಲ್ಲ.

## ಪಿಂಚಣಿ ನಿಬಂಧನೆಗಳು 37ರನ್ವಯ ಸೌಲಭ್ಯಗಳು – ಕಾನೂನು ಪ್ರಕ್ರಿಯೆಯ ಆರಂಭ

ಕಮ್ಯೂನಿನ ಆದ್ಯತೆಯ ವಿಷಯಗಳಲ್ಲಿ ಪಿಂಚಣಿ ನಿಬಂಧನೆ 37ರ ಅನ್ವಯ ತುಟ್ಟಿಭತ್ಯೆ ಪರಿಷ್ಕರಣೆಯನ್ನು ದೊರಕಿಸಿಕೊಡುವುದೂ ಒಂದು. ಈ ಬಗ್ಗೆ ನಮ್ಮ 'ಮೈಸೂರು ಬ್ಯಾಂಕ್ ಶತಾಯು'ವಿನ ಕಳೆದ ಸಂಚಿಕೆಯಲ್ಲಿ ವಿವರಣೆ ನೀಡಲಾಗಿದೆ. ಕಮ್ಯೂನು ಈಗಾಗಲೇ ನ್ಯಾಯಾಲಯದಲ್ಲಿ ದಾವೆ ಹೂಡಿದೆಯಲ್ಲದೆ, ಅಹಮದಾಬಾದ್, ಇಂದೂರು, ಹೈದರಾಬಾದ್, ಜೋಧಪುರ, ಬೆಂಗಳೂರಿನ ವಿವಿಧ ನ್ಯಾಯಾಲಯದಲ್ಲಿ ಬಾಕಿ ಇರುವ ಇತರ

ಪ್ರಕರಣಗಳಲ್ಲೂ ನಿಬಂಧನೆ 37ರ ಅನ್ವಯ ತುಟ್ಟಿಭತ್ಯೆ ಪರಿಷ್ಕರಣೆಯನ್ನು ಪ್ರಸ್ತಾಪಿಸಲು ಉದ್ದೇಶಿಸಲಾಗಿದೆ. ಈ ವಿಷಯವು ಸುಪ್ರೀಂ ಕೋರ್ಟಿನಲ್ಲಿ ಸಲ್ಲಿಸಲಾದ ನ್ಯಾಯಾಲಯ ನಿಂದನೆ ಪ್ರಕರಣದಿಂದ ಮುನ್ನೆಲೆಗೆ ಬಂದಿದ್ದು, ತುಟ್ಟಿಭತ್ಯೆ ಹೆಚ್ಚಳವನ್ನು ನ್ಯಾಯಾಲಯದ ಮೂಲಕ ಆದಷ್ಟು ತ್ವರಿತವಾಗಿ ಇತ್ಯರ್ಥಗೊಳಿಸಲು ಕಮ್ಯೂನು ತನ್ನಿಂದಾದ ಎಲ್ಲಾ ಬಗೆಯ ಕ್ರಮಗಳನ್ನೂ ಕೈಗೊಳ್ಳಲಿದೆ ಎಂಬುದನ್ನು ಸ್ಪಷ್ಟಪಡಿಸುತ್ತೇವೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮ ಕಮ್ಯೂನಿನ ಸದಸ್ಯರಲ್ಲದ ಕೆಲವು ವ್ಯಕ್ತಿಗಳು ತಪ್ಪು ಮಾಹಿತಿ ನೀಡುವುದರ ಮೂಲಕ ನಮ್ಮ ಸದಸ್ಯರಲ್ಲಿ ಕಮ್ಯೂನಿನ ಬಗ್ಗೆ ಮತ್ತು ನ್ಯಾಯಾಲಯದಲ್ಲಿ ದಾವೆ ಹೂಡಿರುವುದರ ಬಗ್ಗೆ ಅಪಪ್ರಚಾರ ಮಾಡುತ್ತಿರುವರಲ್ಲದೆ ಸುಳ್ಳು ಸುದ್ದಿಯನ್ನೂ ಹಬ್ಬಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇಂತಹ ವ್ಯಕ್ತಿಗಳು ಈ ಹಿಂದೆ ನಾವು ನಡೆಸಿದ ಕಾನೂನು ಹೋರಾಟದ ಬಗ್ಗೆಯೂ ಸುಳ್ಳು ಸುದ್ದಿ ಹಬ್ಬಿಸಿದ್ದರು. ಆದರೆ ಇವಾವುದಕ್ಕೂ ನಮ್ಮ ಪಿಂಚಣಿದಾರರು ಬೆಲೆ ಕೊಡಲಿಲ್ಲ. ಅಂತಿಮವಾಗಿ ನ್ಯಾಯಾಲಯದಲ್ಲಿ ಗೆಲುವು ನಮ್ಮದೇ ಆಗಿತ್ತು. ಇದರಿಂದಾಗಿ ಹಲವರ ಪಿಂಚಣಿ ಪರಿಷ್ಕರಣೆಯೂ ಆಗಿ ಸಾಕಷ್ಟು ಮೊತ್ತದ ಬಾಕಿ ಹಣವೂ ದೊರೆಯಿತು. ಕಮ್ಯೂಟೇಷನ್ ವಿಷಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಲಯದ ಮೂಲಕ ಜಯ ಸಾಧಿಸಿದ ದೇಶದ ಏಕೈಕ ನಿವೃತ್ತರ ಸಂಘವೆಂದರೆ ನಮ್ಮ ಕಮ್ಯೂನು ಎಂಬ ಹೆಮ್ಮೆ ನಮಗಿದೆ.

ಅಷ್ಟೇ ಅಲ್ಲದೆ, ಕಮ್ಯೂನು ನಿಗದಿಪಡಿಸಿದ ಅಗತ್ಯಗಳನ್ನು ಪೂರೈಸಿದ ಸದಸ್ಯರ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದೆಂದೂ, ಪ್ರತಿಯೋರ್ವ ಸದಸ್ಯರೂ ವೈಯಕ್ತಿಕವಾಗಿ ವಕಾಲತ್‌ಗೆ ಸಹಿ ಮಾಡುವುದರ ಮೂಲಕ ದಾವೆಯಲ್ಲಿ ಕಕ್ಷಿದಾರರಾಗುವ ಅಗತ್ಯವಿಲ್ಲವೆಂದೂ ಈಗಾಗಲೇ ಹಲವು ಬಾರಿ ಸ್ಪಷ್ಟೀಕರಣ ನೀಡಲಾಗಿದೆ.

ಕಮ್ಯೂನು ನಿಗದಿಪಡಿಸಿದ ಮೊತ್ತವನ್ನು ಪಾವತಿಸಿದ ಎಲ್ಲಾ ಸದಸ್ಯರಿಗೂ ಸ್ವೀಕೃತಿ ಪತ್ರಗಳು, ಬಾಕಿ ಹಣ ಲೆಕ್ಕಾಚಾರ ತಃಖ್ತೆ ಮತ್ತು ಋಣಿಕೆ ಅಧಿಕಾರ ಪತ್ರಗಳನ್ನು ಈಗಾಗಲೇ ಕಳುಹಿಸಲಾಗಿದೆ. ಈ ವಿವರಗಳು ಇನ್ನೂ ತಲುಪದಿದ್ದಲ್ಲಿ, ದಯವಿಟ್ಟು ಇದಕ್ಕೆ ಸಂಬಂಧಿಸಿದ ಕೊಂಡಿ (ಲಿಂಕ್) ಬಳಸುವುದರ ಮೂಲಕ ಅಗತ್ಯ ಮಾಹಿತಿಯನ್ನು ಕಮ್ಯೂನಿಗೆ ಸಲ್ಲಿಸಬೇಕೆಂದು ಕೋರುತ್ತೇವೆ. ಕಾರಣಾಂತರಗಳಿಂದ ಲಿಂಕ್ ಮೂಲಕ ಮಾಹಿತಿ ನೀಡುವುದು ಅಸಾಧ್ಯವಾದಲ್ಲಿ, ತಮ್ಮ ಉದ್ಯೋಗಿ ಸಂಖ್ಯೆ/ ಎಚ್‌ಆರ್‌ಎಂಎಸ್ ಸಂಖ್ಯೆ, ಜಮಾ ಮಾಡಿದ ಮೊಬಲಗು ಮತ್ತು ಜಮಾ ದಿನಾಂಕದ ವಿವರಗಳನ್ನು 7026027774 ಸಂಖ್ಯೆಗೆ ಎಸ್‌ಎಂಎಸ್ ಅಥವಾ ವಾಟ್ಸಾಪ್ ಮೂಲಕ ಕಳುಹಿಸಿ. ಈಗಾಗಲೇ ಕಮ್ಯೂನಿನಿಂದ ವಿವರಗಳನ್ನು ಸ್ವೀಕರಿಸಿದ್ದು, ಋಣಿಕೆ ಅಧಿಕಾರ ಪತ್ರ ನಮೂನೆಯನ್ನು ಇನ್ನೂ ಸಲ್ಲಿಸದವರು, ತಮ್ಮ ಸಹಿಮಾಡಿದ ನಮೂನೆಯನ್ನು 15.02.2021ರ ಒಳಗೇ ತಲುಪುವಂತೆ ಕಮ್ಯೂನಿನ ಕಾರ್ಯಾಲಯಕ್ಕೆ ಕಳುಹಿಸಿಕೊಡಬೇಕೆಂದು ವಿನಂತಿ.

ಮೈಸೂರು ಬ್ಯಾಂಕಿನ ವಿಲೀನಾನಂತರ ನಿವೃತ್ತರಾಗಿದ್ದು, ತಮ್ಮ ಪಿಂಚಣಿ ಕುರಿತ ಮಾಹಿತಿಗಳನ್ನು ಸಲ್ಲಿಸಿದವರಿಗೆ ಈ ಎಲ್ಲಾ ವಿವರಗಳನ್ನು ಜನವರಿ 2021ರ ಅಂತ್ಯದೊಳಗೇ ಕಳುಹಿಸಲಾಗುವುದು. ಆನಂತರ ಕುಟುಂಬ ಪಿಂಚಣಿದಾರರ ವಿವರಗಳನ್ನು ಕೈಗೆತ್ತಿಕೊಳ್ಳಲಾಗುವುದು.

## ಪಿಂಚಣಿ ನಿಬಂಧನೆಗಳು 35(1)ರ ಅನ್ವಯ ಪಿಂಚಣಿ ಪರಿಷ್ಕರಣೆ

ವಿಶೇಷ ಭತ್ಯೆ, ಗ್ರಾಚ್ಯುಯಿಟಿ, ಪಿಂಚಣಿ ನಿಧಿಯ ಮೊತ್ತಕ್ಕೆ ಅನುಸಾರವಾಗಿ ಪಿಂಚಣಿ ಪರಿಷ್ಕರಣೆ ಮುಂತಾದ ವಿಷಯಗಳನ್ನು ಕುರಿತಂತೆ ಕಮ್ಯೂನಿನ ಅಭಿಪ್ರಾಯಗಳನ್ನು 'ಮೈಸೂರು ಬ್ಯಾಂಕ್ ಶತಾಯು'ವಿನ ಈ ಹಿಂದಿನ ಸಂಚಿಕೆಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೂ ಕೆಲವು ವ್ಯಕ್ತಿಗಳು ಹಾಗೂ ಸಂಸ್ಥೆಗಳು ಪಿಂಚಣಿ ನಿಬಂಧನೆ 35(1) 2002–2003ರಲ್ಲಿ ತಿದ್ದು ಪಡಿಯಾಗಿದ್ದು, ಅದರನ್ವಯ ಪಿಂಚಣಿ ಪರಿಷ್ಕರಣೆ ಮಾಡಬಹುದೆಂಬ ತಪ್ಪು ಸಂದೇಶಗಳನ್ನು ರವಾನಿಸುತ್ತಿದ್ದಾರೆ. ನಿಬಂಧನೆ 35(1)ರ ತಿದ್ದುಪಡಿ ಪ್ರಕಾರ– "ಪಿಂಚಣಿ ಮೊಬಲಗು: (ಎ) ಮೂಲ ಪಿಂಚಣಿ ಮತ್ತು ಹೆಚ್ಚುವರಿ ಪಿಂಚಣಿಯನ್ನು ಎಲ್ಲಿ ಅನ್ವಯವಾಗುತ್ತದೋ ಅಲ್ಲಿ, ಅನುಬಂಧ–1ರಲ್ಲಿ ನೀಡಿರುವ ಸೂತ್ರದ ಪ್ರಕಾರ ಹೆಚ್ಚಿಸಬೇಕು". ಈ ಪ್ರಕಾರ ಪಿಂಚಣಿ ಪರಿಷ್ಕರಣೆಗೆ ಆಗ್ರಹಿಸುವವರು, ನ್ಯಾಯಾಲಯದ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ವಿಶ್ಲೇಷಿಸದೆ ಪಿಂಚಣಿದಾರರಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತಿದ್ದಾರೆ. ನ್ಯಾಯಾಲಯವು 'ಅನುಬಂಧ–1ರಲ್ಲಿ ನೀಡಿರುವ ಸೂತ್ರದ ಪ್ರಕಾರ' ತುಟ್ಟಿಭತ್ಯೆಯನ್ನು ಮೂಲ ವೇತನದೊಂದಿಗೆ (ಮೂಲ ಪಿಂಚಣಿ ಅಲ್ಲ) ವಿಲೀನಗೊಳಿಸಬೇಕೆಂದು ಹೇಳಲಾಗಿದೆಯೇ ಹೊರತು, ಸಾಮಾನ್ಯವಾಗಿ ವೇತನ ಪರಿಷ್ಕರಣೆಯ ದ್ವಿಪಕ್ಷೀಯ ಒಪ್ಪಂದಗಳಲ್ಲಿ ಉದ್ಯೋಗಸ್ಥ ಬ್ಯಾಂಕ್ ನೌಕರರ ವೇತನಕ್ಕೆ ಸೇರಿಸುವ ಹೆಚ್ಚುವರಿ ಲೋಡ್‌ನ್ನು, ಪಿಂಚಣಿ ಪರಿಷ್ಕರಣೆಯಲ್ಲೂ ಸೇರಿಸಬೇಕೆಂಬ ಪ್ರಸ್ತಾಪ ಮಾಡಿರುವುದಿಲ್ಲ ಎಂಬುದು ಗಮನಾರ್ಹ ಸಂಗತಿ. ಅಲ್ಲದೆ ಅನುಬಂಧ–1 ರಲ್ಲಿ ನ್ಯಾಯಾಲಯವು ಪ್ರಸ್ತಾಪಿಸಿರುವ ಪಿಂಚಣಿ ವಿಷಯಗಳು ಪಿಂಚಣಿ ನಿಬಂಧನೆ 35(2) ಮತ್ತು 38ರ ಅನ್ವಯ ಪಿಂಚಣಿಯ ತಪ್ಪು ಲೆಕ್ಕಾಚಾರವನ್ನು ಸರಿಪಡಿಸುವುದನ್ನು ಒಳಗೊಂಡಿದ್ದು, ಇದು ಸಂಬಂಧಿಸಿದ ಪಿಂಚಣಿದಾರರಿಗೆ ಒಂದು ಬಾರಿ ಮಾತ್ರ ಅನ್ವಯವಾಗುತ್ತದೆ. ಅಲ್ಲದೆ, ಪಿಂಚಣಿ ನಿಬಂಧನೆಗಳು ಜಾರಿಗೆ ಬಂದ ನಂತರ ಅಂದರೆ 29.09.1995ರ ನಂತರ ನಿವೃತ್ತರಾದವರ ಪಿಂಚಣಿ ಸುಧಾರಣೆ ಅಥವಾ ಪರಿಷ್ಕರಣೆಯ ಬಗ್ಗೆ ಅನುಬಂದ–1ರಲ್ಲಿ ಯಾವುದೇ ಪ್ರಸ್ತಾಪವಿರುವುದಿಲ್ಲ. ಇತರ ಕೆಲವು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟು ನೀಡಿರುವ ಪ್ರಕಾರ ಯಾವುದೇ ನಿಯಮ ನಿಬಂಧನೆಗಳನ್ನು ಸಂಪೂರ್ಣವಾಗಿ ಪರಾಮರ್ಶಿಸಬೇಕೇ ವಿನಾ ಭಾಗಶಃ ವಿಶ್ಲೇಷಿಸುವುದು ಸರಿಯಲ್ಲ. ಆದುದರಿಂದ ಪಿಂಚಣಿ ನಿಬಂಧನೆ 35(1)ರ ಅನ್ವಯ ನ್ಯಾಯಾಲಯದ ನಿರ್ಣಯಗಳನ್ನು ಆಧರಿಸಿ ಪಿಂಚಣಿ ಸುಧಾರಣೆಗೆ ಆಗ್ರಹಿಸುವುದು ಪಿಂಚಣಿದಾರರನ್ನು ಸಂಕಷ್ಟಕ್ಕೆ ತಳ್ಳುತ್ತದೆ ಎಂಬುದು ನಮ್ಮ ಅಭಿಪ್ರಾಯ. ಎಲ್ಲಕ್ಕಿಂತ ಹೆಚ್ಚಾಗಿ, ಈ ಹಿಂದಿನ ಏಳು ಸಹವರ್ತಿ ಬ್ಯಾಂಕುಗಳ ಪೈಕಿ ಯಾವುದೇ ಸಹವರ್ತಿ ಬ್ಯಾಂಕಿನ ಪಿಂಚಣಿ ನಿಬಂಧನೆಗಳೂ ಈವರೆಗೆ ತಿದ್ದುಪಡಿಗೆ ಒಳಪಟ್ಟಿರುವುದಿಲ್ಲ ಎಂಬುದು ಗಮನಿಸಬೇಕಾದ ಅಂಶ. ಆದುದರಿಂದ ನಿಬಂಧನೆ 2002–2003ರ ತಿದ್ದುಪಡಿಗೆ ಸಂಬಂಧಿಸಿದ ನಿರ್ದೇಶನಗಳು ಸಹವರ್ತಿ ಬ್ಯಾಂಕಿನ ನಿವೃತ್ತರಿಗೆ ಅನ್ವಯಿಸುವುದಿಲ್ಲ.

## 11ನೇ ದ್ವಿಪಕ್ಷೀಯ ಒಪ್ಪಂದ – ಪರಿಷ್ಕೃತ ಪಿಂಚಣಿ ಪ್ರಕಾರ ಕಮ್ಯುಟೇಶನ್ ಪಡೆಯುವಿಕೆ

11ನೇ ದ್ವಿಪಕ್ಷೀಯ ಒಪ್ಪಂದವು 01.11.2017ರಿಂದ ಜಾರಿಗೆ ಬಂದಿದ್ದು, ಆ ದಿನಾಂಕದ ನಂತರ ನಿವೃತ್ತಿಯಾದವರ ಮೂಲ ಪಿಂಚಣಿ ಮತ್ತಿತರ ನಿವೃತ್ತಿ ವೇತನ ಸೌಲಭ್ಯಗಳು ಪರಿಷ್ಕರಣೆಯಾಗಿ, ಹೆಚ್ಚುವರಿ ಭಾಗದ ಬಾಕಿ ಮೊತ್ತ ದೊರೆಯಲಿದೆ. ಈ ಪೈಕಿ ಕಮ್ಯುಟೇಷನ್ ಮೊತ್ತದಲ್ಲಿ ಹೆಚ್ಚಳವೂ ಒಂದು. ಪಿಂಚಣಿದಾರನು ಕಮ್ಯುಟೇಷನ್ ಹಣವನ್ನು ನಿವೃತ್ತಿಯ ಸಂದರ್ಭದಲ್ಲಿಯೇ ಪಡೆಯಬೇಕೆನ್ನುವ ಯಾವುದೇ ಕಟ್ಟುಪಾಡುಗಳಿರುವುದಿಲ್ಲ. ಕಮ್ಯೂಟೇಷನ್ ಹಣವನ್ನು ಪಡೆಯಬೇಕೇ ಬೇಡವೇ, ಬೇಕಿದ್ದರೆ ಯಾವಾಗ ಪಡೆಯಬೇಕು ಎಂಬುದು ಪಿಂಚಣಿದಾರರ ವಿವೇಚನೆಗೆ ಬಿಟ್ಟದ್ದು. ಆದುದರಿಂದ ಪ್ರಸಕ್ತ ಪಿಂಚಣಿ ಪರಿಷ್ಕರಣೆ ಸಂದರ್ಭದಲ್ಲಿ ಲಭಿಸುವ ಹೆಚ್ಚುವರಿ ಕಮ್ಯುಟೇಷನ್ ಪಡೆಯುವ ಬಗ್ಗೆ ಅನೇಕ ಪಿಂಚಣಿದಾರರಲ್ಲಿ ಗೊಂದಲ ಉಂಟಾಗಿರುವುದು ಸಹಜ. ಇದಕ್ಕೆ ಮುಖ್ಯ ಕಾರಣ ಒಟ್ಟಾರೆ ಕಮ್ಯುಟೇಷನ್ ಮೊತ್ತದಲ್ಲಿ ಹೆಚ್ಚಳವಾಗುವುದರಿಂದ, ಕಮ್ಯೂಟೇಷನ್‌ಗೆ ಸಂಬಂಧಿಸಿದ ಮಾಸಿಕ ಕಂತಿನ ಮೊತ್ತವೂ ಹೆಚ್ಚಳಗೊಂಡು ಮುಂದಿನ ದಿನಗಳಲ್ಲಿ ತನ್ನ ನಿವ್ವಳ ಪಿಂಚಣಿ ಕಡಿಮೆಯಾಗುತ್ತದೆ ಎನ್ನುವುದು.

ನಮ್ಮ ಅಭಿಪ್ರಾಯದ ಪ್ರಕಾರ, ನಿವೃತ್ತರು ತಮಗೆ ಲಭಿಸುವ ಕಮ್ಯುಟೇಷನ್ ಮೊಬಲಗನ್ನು ಆಯ್ಕೆ ಮಾಡಿಕೊಳ್ಳುವುದು ಒಳ್ಳೆಯದು. ಏಕೆಂದರೆ ಅದರಿಂದ ಹಲವಾರು ಪ್ರಯೋಜನಗಳಿದ್ದು, ಈ ಮೊತ್ತವು ಆದಾಯ ತೆರಿಗೆಯಿಂದ ವಿನಾಯಿತಿ ಪಡೆದಿರುತ್ತದೆ. ಕಮ್ಯುಟೇಷನ್ ಮೊತ್ತವನ್ನು ಬ್ಯಾಂಕ್ ಠೇವಣಿಯಲ್ಲಿ ಹೂಡಿಕೆ ಮಾಡಿದರೆ ಬರುವ ಮಾಸಿಕ ಬಡ್ಡಿಗಿಂತ ಕಮ್ಯೂಟೇಷನ್ ಕಂತು ಹೆಚ್ಚು ಎಂದು ಈಗ ಎನಿಸಬಹುದು. ಆದರೆ ಪದೇಪದೇ ಬ್ಯಾಂಕ್ ಬಡ್ಡಿ ದರಗಳಲ್ಲಿ ಇಳಿಮುಖವಾಗುತ್ತಿರುವುದರಿಂದ ಮತ್ತು ಕಾಲಕಾಲಕ್ಕೆ ತುಟ್ಟಿಭತ್ಯೆ ಪರಿಷ್ಕರಣೆ ಆಗುವುದರಿಂದ, ಕ್ರಮೇಣ ಕಮ್ಯುಟೇಷನ್‌ನ ಮಾಸಿಕ ಕಂತಿನ ವಸೂಲಿ ಅತ್ಯಂತ ಹೊರೆ ಎನಿಸುವುದಿಲ್ಲ. ಅಲ್ಲದೆ, ಪಿಂಚಣೀದಾರನು ಪಡೆದ ಕಮ್ಯುಟೇಷನ್

Posted on 18.01.2021 No. of Page : 6

**Registered with the Registrar of Newspapers for India under RNI No.KARBIL/2016/69545 Postal Reg. No.KA/BGW-1788/2020-2022, Reg. No.MAG (3)/NPP/391/2015-16. Licence to post without Pre-payment. License No.WPP-356/2020-22. Published on 15th of every month and posted on 17.12.2020 and posted at Bengaluru PSO, Bengaluru – 560 026.**

**Printed and Published by : Shri C N Prasad by and on behalf of State Bank of Mysore Pensioners' Commune at 1st Floor, SBI Mysore Bank Circle Branch Premises, 644/645, Avenue Road, Bengaluru - 560 009.**
**Printed @ Cauvery Enterprises # 18, "Cauvery", 8th Main, 8th Cross, S. R. Nagar, Bengaluru - 560 027.**
**Editor : Shri V. Dattathri**

ಮೊತ್ತವನ್ನು ಸಾಲವೆಂದು ಪರಿಗಣಿಸಲಾಗುವುದಿಲ್ಲ. ಅಂದರೆ, ಒಂದು ವೇಳೆ ಪಿಂಚಣಿದಾರನು ಮರಣ ಹೊಂದಿದರೆ ಮಾಸಿಕ ಕಂತುಗಳ ವಸೂಲಿ ಅಲ್ಲಿಗೇ ಮುಕ್ತಾಯಗೊಳ್ಳುವುದೇ ಹೊರತು, ಕಮ್ಯುಟೇಷನ್ ಮೊಬಲಗಿನ ಉಳಿದ ಮಾಸಿಕ ಕಂತುಗಳನ್ನು ಆತನ ಕುಟುಂಬ ಪಿಂಚಣಿದಾರರಾಗಲೀ, ಅಥವಾ ವಾರಸುದಾರರಾಗಲೀ ಮರುಪಾವತಿ ಮಾಡಬೇಕಾದ ಅವಶ್ಯಕತೆ ಇರುವುದಿಲ್ಲ. ಪಿಂಚಣಿದಾರರು ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ತಮಗೆ ಲಭಿಸುವ ಹೆಚ್ಚುವರಿ ಕಮ್ಯುಟೇಷನ್ ಸೌಲಭ್ಯವನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ.

## ಕಮ್ಯೂನಿನ ಕಾರ್ಯದರ್ಶಿ ಧರಣೇಂದ್ರ ಕುಮಾರ್ ಇನ್ನಿಲ್ಲ

ಹೊಸ ವರ್ಷಕ್ಕೆ ಪಾದಾರ್ಪಣ ಮಾಡುತ್ತಿದ್ದಂತೆಯೇ ನಮ್ಮ ಕಮ್ಯೂನಿಗೆ ಇದೊಂದು ಭಾರೀ ಆಘಾತಕಾರೀ ಸಂಗತಿ. ಕಮ್ಯೂನಿನ ಕಾರ್ಯದರ್ಶಿಗಾಗಿದ್ದ ಧರಣೇಂದ್ರ ಕುಮಾರ್ 2ನೇ ಜನವರಿ 2021ರಂದು ನಿಧನರಾಗಿದ್ದಾರೆ. ಮೈಸೂರು ಬ್ಯಾಂಕ್ ನೌಕರರ ಸಂಘದಲ್ಲೂ ಸಕ್ರಿಯರಾಗಿದ್ದ ಧರಣೇಂದ್ರ ಕುಮಾರ್, ನಿವೃತ್ತಿಯ ನಂತರ ನಮ್ಮ ಕಮ್ಯೂನಿನ ತುಮಕೂರು ಜಿಲ್ಲಾ ಘಟಕವನ್ನು ಸ್ಥಾಪಿಸುವಲ್ಲಿ ಬಹಳ ಪ್ರಮುಖ ಪಾತ್ರ ವಹಿಸಿದ್ದರು. ಸ್ವತಃ ಓರ್ವ ಚಿತ್ರ ಕಲಾವಿದರಾಗಿದ್ದ ಅವರು, ತಮ್ಮ ಸಹೃದಯತೆ, ಸ್ನೇಹಪರತೆ ಹಾಗೂ ಕಾರ್ಯಶೀಲತೆಯಿಂದ ಓರ್ವ ಜನಾನುರಾಗಿ ವ್ಯಕ್ತಿಯಾಗಿ ರೂಪುಗೊಂಡಿದ್ದರು. ಕಮ್ಯೂನಿನ ಕಾರ್ಯದರ್ಶಿಯಾಗಿ ತುಂಬಾ ಲವಲವಿಕೆಯಿಂದ ಕಾರ್ಯನಿರ್ವಹಿಸುತ್ತಿದ್ದ ಧರಣೇಂದ್ರ ಕುಮಾರ್ ಅವರ ನಿಧನದಿಂದಾಗಿ ನಮ್ಮ ಕಮ್ಯೂನ್ ಓರ್ವ ಸಕ್ರಿಯ ಕಾರ್ಯಕರ್ತನನ್ನು ಕಳೆದುಕೊಂಡಿದೆ. ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ ಮತ್ತು ಭಗವಂತನು ಅವರ ಕುಟುಂಬ ವರ್ಗದವರು, ಸ್ನೇಹಿತರು ಹಾಗೂ ಹಿತೈಷಿಗಳಿಗೆ ಧರಣೇಂದ್ರ ಕುಮಾರ್ ಅವರ ಅಗಲಿಕೆಯಿಂದಾದ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ನಾವೆಲ್ಲರೂ ಪ್ರಾರ್ಥಿಸೋಣ.

## ಕಮ್ಯೂನಿನ ಶಿವಮೊಗ್ಗ ಘಟಕದ ಕಾರ್ಯಾಲಯ ಉದ್ಘಾಟನೆ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೆನ್ಷನರ್ಸ್ ಕಮ್ಯೂನಿನ ಶಿವಮೊಗ್ಗ ಘಟಕದ ಕಛೇರಿಯು ದಿನಾಂಕ 23–12–2020ರ ಬುಧವಾರದಂದು ಶಿವಮೊಗ್ಗ ನಗರದ ಬಿ. ಹೆಚ್. ರಸ್ತೆಯ ಹೃದಯ ಭಾಗದಲ್ಲಿರುವ ಸರ್ಕಾರಿ ಸೈನ್ಸ್ ಕಾಲೇಜು ಆವರಣದಲ್ಲಿರುವ ಪಾರಂಪರಿಕ ಕಟ್ಟಡದಲ್ಲಿ ವಿಧ್ಯುಕ್ತವಾಗಿ ಆರಂಭವಾಗಿದೆ.

23–12–2020ರಂದು ಬೆಳಗ್ಗೆ ಗಣಪತಿ ಪೂಜೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಕಮ್ಯೂನಿನ ಕಛೇರಿಯ ಕಟ್ಟಡದ ಅನುಮತಿಗೆ ವಿಶೇಷವಾಗಿ ಆಸಕ್ತಿ ತೋರಿ ಜಿಲ್ಲಾಡಳಿತದ ಮೂಲಕ ಕಛೇರಿಗಾಗಿ ಸ್ಥಳಾವಕಾಶ ಮಾಡಿಕೊಟ್ಟ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವರಾದ ಸನ್ಮಾನ್ಯ ಶ್ರೀ ಕೆ. ಎಸ್. ಈಶ್ವರಪ್ಪನವರು ಮೈಸೂರು ಬ್ಯಾಂಕ್ ಸಂಸ್ಥಾಪಕರಾದ ಶ್ರೀಮನ್ ಮಹಾರಾಜ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಮತ್ತು ದಿವಾನ್ ಸರ್. ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಛೇರಿಯನ್ನು ಉದ್ಘಾಟಿಸಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೆನ್ಷನರ್ಸ್ ಕಮ್ಯೂನಿನ ಎಲ್ಲಾ ಸದಸ್ಯರಿಗೂ ಇದರಿಂದ ಅನುಕೂಲವಾಗಲೆಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಚಂದ್ರಶೇಖರ್ ಶರ್ಮ ಮತ್ತು ಆ ಭಾಗದ ಕಾರ್ಪೋರೇಟರ್ ಶ್ರೀ ಪ್ರಭು ಮತ್ತು ಕಟ್ಟಡದ ಮಂಜೂರಾತಿಲ್ಲಿ ವಿಶೇಷವಾಗಿ ಸಹಕರಿಸದ ಕಮ್ಯೂನಿನ ಹಿರಿಯ ಸದಸ್ಯರಾದ ಶ್ರೀ ಪಟ್ಟಾಭಿರಾಮ್ ಅವರನ್ನು ಗೌರವಿಸಲಾಯಿತು.

ಶಿವಮೊಗ್ಗ ಘಟಕದ ಅಧ್ಯಕ್ಷ ಶ್ರೀ ಕೆ. ಟಿ. ಶ್ರೀನಿವಾಸ ರಾವ್, ಕಾರ್ಯಾಧ್ಯಕ್ಷ ಶ್ರೀ ಕೆ. ಜಿ. ಕೃಷ್ಣಾನಂದ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ಸೋಮಶೇಖರ್ ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳೊನ್ನೊಳಗೊಂಡಂತೆ ಅಪಾರ ಸಂಖ್ಯೆಯ ಸದಸ್ಯರು ಸಂಭ್ರಮದಿಂದ ಭಾಗವಹಿಸಿದ್ದರು.

To enable remit/donate, Account Details of Commune are as under :
**SB A/c. No. : 64094412180**
**with State Bank of India, Mysore Bank Circle Branch**

**CONTACT DETAILS OF OUR COMMUNE :**

**Email ID :** sbmpensioners@gmail.com **Website :** www.sbmpensioners.in
**Email Group :** sbmpensioners@googlegroups.com **Face Book :** sbm.pensioners, **Post Box No.:** 9738
**Whatsapp : 702 602 7774 Phone Nos.: 259 44299**

Book-post

From
**STATE BANK OF MYSORE PENSIONERS' COMMUNE**
**Ground Floor, 'A' Block, BKG Complex,**
**SBI Mysore Bank Circle Br. Compound,**
**Avenue Road, Bangalore - 560009.**
**Ph. No. : Off:-259 44299 Mob : 7026027774**